**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ: 289/2017</u>** **CW**–08 **PW**–05

**<u>ಸಾಕ್ಷಿಯನ್ನು ದಿಃ 08.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಹೆಸರುಃ | ಮಧು ಎಂ |
| ತಂದೆಯ ಹೆಸರುಃ | ಮಾದಯ್ಯ |
| ವಯಸ್ಸುಃ | 35 ವರ್ಷ |
| ವೃತ್ತಿಃ | ಚಾಲಕ |
| ವಾಸ ಸ್ಥಳಃ | ಬಳೆಚನ್ನವಲಸ ಗ್ರಾಮ, |

**<u>ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಈಗ ಸಾಕ್ಷಿಗೆ ಒಂದು ಸ್ಥಳ ಮತ್ತು ಅಮಾನತ್ತು ಪಂಚನಾಮೆ ತೋರಿಸಿದ್ದು ನೋಡಿ ಗುರುತಿಸಲಾಗಿ ನಿಪಿ 4 ಎಂದು ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ಹೀಗೆ 8 ವರ್ಷಗಳ ಹಿಂದೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ . ಯಾವ ವಿಚಾರಕ್ಕೆ ಗೊತ್ತಿಲ್ಲ . ನನ್ನ ಸಮಕ್ಷಮ ಪೋಲೀಸರು ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ . ನಿಪಿ 4 ಕ್ಕೆ ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆ ಗೊತ್ತಿಲ್ಲ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 05.08.2016 ರಂದು ಚನ್ನರಾಯಪಟ್ಟಣ ಕಡೆಗೆ ಹೋಗುವ ಅರಳಾಪುರ ಗೇಟ್ ನಲ್ಲಿ ಇರುವ ಬಿಎಂ ರಸ್ತೆಯ ದಕ್ಷಿಣ ಕಡೆಯಲ್ಲಿರುವ ರಸ್ತೆಯ ಅಂಚಿನಲ್ಲಿ ಅಪಘಾತ ಸಂಬಂಧ ಪೋಲೀಸರು ಮಹಜರ್ ಮಾಡಲು ಬಂದಿದ್ದು , ನಾನು ಮತ್ತು ಚಾಸಾ 7 ಮತ್ತು 9 ರವರು ಸ್ಥಳದಲ್ಲಿ ಹಾಜರಿದ್ದು , ನಿಪಿ 4 ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ . ಆಗ ಸಮಯ ಬೆಳಗ್ಗೆ 11.00 ಗಂಟೆಯಿಂದ 12.30 ಆಗಿತ್ತು ಎಂದರೆ ಸರಿಯಲ್ಲ . ಪೋಲೀಸರು ಲನನ್ನ ಸಮಕ್ಷಮ ಕೆಎ 41 ಬಿ 6694 ಒಂದು ಕಾರು ಮತ್ತು ಕೆಎ 13 ಎ 6074 ಆಟೋರಿಕ್ಷಾವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.</u>**

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**